81	ಹುನಸೂರು	50 00
82	ಬನ್ನೂರು	75 00
83	ರಾಮನಗರಂ	150 00
84	ಚಿಕ್ಕಮಗಳೂರು	25 00
85	ಶ್ರೀರಂಗಪಟ್ಟಣ	50 00
86	ನಾಗಮಂಗಲ	50 00
87	ತಿಪಟೂರು	50 00
88	ಸಂಡೂರು	50 00
89	ಬಾಗೇಪಲ್ಲಿ	25 00
90	ಹರಿಹರ	25 00
91	ಹಾವೇರಿ	25 00
	ಒಟ್ಟು	**6325 00**

1522 (2205) ಶ್ರೀ ಶಿವಾನಂದ ಎಸ್ ಪಾಟೀಲ್ (ಬಸವನಬಾಗೇವಾಡಿ) – ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಹೆದ್ದಾರಿಗಳ ಅಭಿವೃದ್ಧಿ ಪ್ರಾಧಿಕಾರದ ಪ್ಯಾಕೇಜ್ 2 ರಲ್ಲಿ ಅಭಿವೃದ್ಧಿಪಡಿಸಲು ಆಯ್ಕೆ ಮಾಡಿರುವ ರಾಜ್ಯ ಹೆದ್ದಾರಿಗಳು ಯಾವುವು (ಪಟ್ಟಿ ನೀಡುವುದು),

ಆ) ಅದರಡಿಯಲ್ಲಿ ಮನಗೂಳಿ ಬಿಜ್ಜಳ ರಾಜ್ಯ ಹೆದ್ದಾರಿಯನ್ನು ಅಭಿವೃದ್ಧಿಪಡಿಸಲಾಗುತ್ತಿದೆಯೇ,

ಇ) ಪ್ಯಾಕೇಜ್ – 2 ರಲ್ಲಿ ಮನಗೂಳಿ ಬಿಜ್ಜಳ ರಾಜ್ಯ ಹೆದ್ದಾರಿಯನ್ನು ತೆಗೆದುಕೊಂಡು ಪುನರ್ ವ್ಯವಸ್ಥೆ ಪಡಿಸದೇ ಇದ್ದಲ್ಲಿ ಕಾರಣಗಳೇನು,

ಈ) ಪ್ರಸಿದ್ಧ ಪ್ರವಾಸಿ 3 ಸ್ಥಳಗಳನ್ನು ಸೇರುವ ಮತ್ತು ರಾಯಚೂರು, ಬಿಜಾಪುರ ಜಿಲ್ಲೆಗಳನ್ನು ಜೋಡಿಸುವ ಹೆದ್ದಾರಿಯನ್ನು ಪ್ಯಾಕೇಜ್ 2 ರಲ್ಲಿಯೇ ಸೇರಿಸಿ ಪುನರ್ ವ್ಯವಸ್ಥೆಗೊಳಿಸಲು ಕ್ರಮ ಕೈಗೊಳ್ಳಲಾಗುವುದೇ,

ಉ) ಹಾಗಿದ್ದಲ್ಲಿ, ಯಾವ ಗೊತ್ತುಪಡಿಸಿದ ಕಾಲ ಮಿತಿ ಹಾಕಿಕೊಂಡು ಅಭಿವೃದ್ಧಿ ಅಥವಾ ಪುನರ್ ವ್ಯವಸ್ಥೆಗೊಳಿಸಲಾಗುವುದು,

ಊ) ಇದಕ್ಕಾಗಿ ತಗಲುವ ಅಂದಾಜು ವೆಚ್ಚ ಎಷ್ಟು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರವನ್ನು ಕರ್ನಾಟಕ ಸರ್ಕಾರದಲ್ಲಿ ಸ್ಥಾಪಿಸಲಾಗಿರುವುದಿಲ್ಲ

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಇ) ಪ್ರಶ್ನೆ (ಅ) ನಲ್ಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಈ) ಪ್ರಶ್ನೆ (ಅ) ನಲ್ಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಉ) ಪ್ರಶ್ನೆ (ಅ) ನಲ್ಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಊ) ಪ್ರಶ್ನೆ (ಅ) ನಲ್ಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

1523 (2206) ಶ್ರೀ ಶಿವಾನಂದ ಎಸ್ ಪಾಟೀಲ್ (ಬಸವನಬಾಗೇವಾಡಿ) – ಮಾನ್ಯ ಯುವಜನಸೇವಾ ಮತ್ತು ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಇಂಡೋರ್ ಸ್ಟೇಡಿಯಂ (ಒಳಾಂಗಣ ಕ್ರೀಡಾಂಗಣ) ಗಳ ಸಂಖ್ಯೆ ಎಷ್ಟು, (ಜಿಲ್ಲಾವಾರು ಪಟ್ಟಿ ನೀಡುವುದು),

ಆ) ರಾಜ್ಯದಲ್ಲಿ ಇನ್ನು ನಿರ್ಮಾಣ ಹಂತದಲ್ಲಿರುವ ಒಳಾಂಗಣ ಕ್ರೀಡಾಂಗಣ ಸಂಖ್ಯೆ ಎಷ್ಟು, ಅವುಗಳ ನಿರ್ಮಾಣ ಕಾರ್ಯ ಎಷ್ಟು ವರ್ಷಗಳಿಂದ ನಡೆಯುತ್ತಿದೆ,